**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರ್ಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 366/2025**

**ಚಾ.ಸಾ - 16**

**ಪ್ರಾ.ಸಾ -10**

**ಸಾಕ್ಷಿಗೆ ದಿನಾಂಕ 18-02-2026 ರಂದು ಪ್ರಮಾಣ ವಚನ ಬೋಧಿಸಲಾಯಿತು**

| | | |
|---|---|---|
| ಸಾಕ್ಷಿಯ ಹೆಸರು | ಃ | ಕಲಾವತಿ |
| ಗಂಡನ ಹೆಸರು | ಃ | ಚಿದಾನಂದ |
| ವಯಸ್ಸು | ಃ | 57 ವರ್ಷ |
| ಉದ್ಯೋಗ | ಃ | ಆರಕ್ಷಕ ಉಪ-ನಿರೀಕ್ಷಕರು, ಜೇವರ್ಗಿ ಪೊಲೀಸ್ ಠಾಣೆ |
| ವಾಸಸ್ಥಳ | ಃ | ಜೇವರ್ಗಿ |

**ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ:**

ನಾನು 2024 ರಿಂದ ಇಲ್ಲಿಯವರೆಗೆ ಜೇವರ್ಗಿ ಪೋಲಿಸ ಠಾಣೆಯಲ್ಲಿ ಆರಕ್ಷಕ ಉಪ-ನಿರೀಕ್ಷಕಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 18-05-2025ರಂದು ಸಂಜೆ 4 ಗಂಟೆಗೆ ನಾನು SHO ಕರ್ತವ್ಯದಲ್ಲಿದ್ದಾಗ ಚಾಸಾ-1ರವರು ಬೆರಳಚ್ಚು ಮಾಡಿದಂತಹ ದೂರನ್ನು ನೀಡಿರುತ್ತಾರೆ. ಅದರ ಆಧಾರದ ಮೇಲೆ ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿ ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-17 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಸಾಕ್ಷಿಗೆ ನಿಪಿ-5 ದೂರನ್ನು ತೋರಿಸಲಾಗಿ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಾಕ್ಷಿ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿ ಪ್ರಥಮ ವರ್ತಮಾನ ವರದಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಪ್ರಥಮ ವರ್ತಮಾನ ವರದಿಯನ್ನು ನಿಪಿ-18 ಎಂದು ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ  ಸಿ.ಆರ್.ಪಿ. ವಕೀಲರಿಂದ</u>**

ಆರೋಪಿಯು ಯಾವುದೇ ತಪ್ಪನ್ನು ಮಾಡಿಲ್ಲದಿದ್ದರೂ ಸಹ ನೀವು ಮೇಲಾಧಿಕಾರಿಯ ಮಾತನ್ನು ಕೇಳಿ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 366/2025**

**ಚಾ.ಸಾ - 6**
**ಪ್ರಾ.ಸಾ - 11**

**ಸಾಕ್ಷಿಗೆ ದಿನಾಂಕ 18-02-2026ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಲಿಂಗರಾಜ |
| ತಂದೆಯ ಹೆಸರು | ಃ | ಬಸವರಾಜ |
| ವಯಸ್ಸು | ಃ | 30 ವರ್ಷ |
| ಉದ್ಯೋಗ | ಃ | ವ್ಯಾಪಾರ |
| ವಾಸಸ್ಥಳ | ಃ | ಗೋಲಗೇರಿ |

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ. ಚಾಸಾ-1 , 7, 9 ಮತ್ತು 10 ಗೊತ್ತಿಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

6-7 ತಿಂಗಳ ಹಿಂದೆ ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಪೊಲೀಸರು ಒಂದು ದಾಖಲೆಗೆ ನನ್ನ ಸಹಿ ಪಡೆದಿರುತ್ತಾರೆ. ನಾನು ಸಹಿ ಮಾಡಿದಂತಹ ದಾಖಲೆಯಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿಲ್ಲ ಯಾವುದೇ ಬಂಗಾರದ ಆಭರಣ ಜಪ್ತಿಪಡಿಸಿಕೊಂಡಿಲ್ಲ.

ಸಾಕ್ಷಿಗೆ ನಿಪಿ-12 ಮತ್ತು 13 ಜಪ್ತಿ ಪಂಚನಾಮೆಗಳನ್ನು ತೋರಿಸಲಾಗಿ ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಾಕ್ಷಿ ಸಹಿಗಳನ್ನು ನಿಪಿ-12(ಬಿ) ಮತ್ತು ನಿಪಿ-13(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ-14 ನಿಪಿ-15 ಪೋಟೊವನ್ನು ತೋರಿಸಲಾಗಿ ಅದರಲ್ಲಿ ತಾನಿರುವುದಾಗಿ ನೋಡಿ ಒಪ್ಪಿಕೊಂಡಿರುತ್ತಾರೆ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿಃ 18-06-2025 ರಂದು ಸಾಯಂಕಾಲ 6-15 ರಿಂದ 7-00 ಗಂಟೆವರೆಗೆ ಜೇವರ್ಗಿಯ ವೃತ್ತ ಪೊಲೀಸ್ ಠಾಣೆಯಲ್ಲಿ ನಿಮ್ಮ ಮತ್ತು ಚಾಸಾ-7ರವರ ಸಮಕ್ಷಮ ನಿಪಿ-12 ರಂತೆ ಪಂಚನಾಮೆ ಮಾಡಿ 3 ತೊಲೆ ಬಂಗಾರದ ತಾಳಿಸಾಮಾನು, 5 ತೊಲೆ 9 ಗ್ರಾಂ 2 ಬಂಗಾರದ ಬಳೆಗಳು, 5 ತೊಲೆ 8 ಗ್ರಾಂ ಬಂಗಾರದ ಕೊರಳಿಗೆ ಹಾಕುವ ಸರ, 2 ತೊಲೆಯ ಬಂಗಾರದ ಗುಂಡಿನ ಸರಗಳನ್ನು ಆರೋಪಿಯಿಂದ ಕಳ್ಳತನವಾದ ವಿಚಾರವಾಗಿ ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಆ ಸಮಯದಲ್ಲಿ ನಿಪಿ-14 ರಂತೆ ಪೋಟೊ ತೆಗೆದಿರುತ್ತಾರೆ ಎಂದರೆ ಫೊಟೊ ತೆಗೆದಿರುತ್ತಾರೆ ಎಂದು ಉತ್ತರಿಸುತ್ತಾರೆ.

ದಿನಾಂಕ 18-06-2025 ರಂದು ಸಂಜೆ 7-15 ರಿಂದ 8-00 ಗಂಟೆವರೆಗೆ ಚಾಸಾ-8ರವರನ್ನು ಕರೆಯಿಸಿ ನಿಮ್ಮ ಮತ್ತು ಚಾಸಾ-7ರವರ ಸಮಕ್ಷಮ ಆರೋಪಿತಳಿಂದ ಜಪ್ತಿಪಡಿಸಿಕೊಂಡಂತಹ ಬಂಗಾರದ ಆಭರಣಗಳನ್ನು ತೂಕ ಮಾಡಿ ಪಂಚನಾಮೆ ಮಾಡಿರುತ್ತಾರೆ ಎಂದರೆ ಫೊಟೊ ತೆಗೆದಿರುತ್ತಾರೆ ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ನಿಪಿ-15 ರಂತೆ ಫೊಟೊ ತೆಗೆದಿರುತ್ತಾರೆ ಎಂದರೆ ತೆಗೆದಿರುತ್ತಾರೆ ಎಂದು ಉತ್ತರಿಸುತ್ತಾರೆ.

ನಿಮಗೆ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿತಳಿಗೆ ಸಹಾಯ ಮಾಡಲೆಂದು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರಿಂದ ಪಾಟೀ ಸವಾಲು ಇರುವುದಿಲ್ಲ.**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ